ದಿನಾಂಕಃ 25.06.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದ:**

ದಾವಾ ಬಿ ಅನುಸೂಚಿ ಸ್ವತ್ತಿನ ಚೆಕ್ ಬಂದಿ ತೋರಿಸಲು ಪಾಲುಪಟ್ಟಿಯನ್ನು ಹಾಜರುಪಡಿಸಿದ್ದೇನೆ. ಆ ಜಮೀನು ನನ್ನ ಪಾಲಿಗೆ ಬಂದಿದೆ. ಈ ರೀತಿ ಪಾಲುಪಟ್ಟಿಯ ಪ್ರಕಾರ ಸದರಿ ಜಮೀನು ನನ್ನ ಹಿಸ್ಸೆಗೆ ಬಂದಿಲ್ಲ ಎಂದರೆ ಸರಿಯಲ್ಲ. ಆ ಜಮೀನಿನ ಖಾತೆ ಸರ್ಕಾರದ ಹೆಸರಿನಲ್ಲಿ ಇದೆ. ದಾವಾ ಬಿ ಅನುಸೂಚಿ ಸ್ವತ್ತಿನ ನನಗೆ ಯಾವುದೇ ಹಕ್ಕು ಇಲ್ಲ ಹಾಗೂ ಆ ಜಮೀನಿನ ಸ್ವಾದೀನದಲ್ಲಿ ನಾನು ಇಲ್ಲ ಎಂದರೆ ಸರಿಯಲ್ಲ. ಬೂದಾನ ಜಮೀನುಗಳಿಗೆ ಸಂಬಂದಪಟ್ಟಂತೆ ವಾರ್ಷಿಕವಾಗಿ ಗೇಣಿ ಕಟ್ಟಬೇಕು ಎಂದರೆ ಸರಿ. ಗೇಣಿ ಕಟ್ಟುತ್ತಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಪ್ರತಿ ವರ್ಷ ಗೇಣಿ ಕಟ್ಟಿದ ಬಗ್ಗೆ ದಾಖಲೆ ಇದೆ. ಹಾಗೆಯೇ ಗೇಣಿ ಹಣ ನಿಗದಿಯಾಗಿಲ್ಲ ಆದರೆ ನಾವು ಪಾವತಿಸುವಷ್ಟು ಪಡೆಯುತ್ತಿದ್ದಾರೆ. ಈ ಹಿಂದೆ ಗೇಣಿ ರೂಪದಲ್ಲಿ ಎಷ್ಟು ಭತ್ತ ಕೊಟ್ಟಿದ್ದೇವೆ ಎಂದು ದಾಖಲೆ ಇಲ್ಲ. ದಾವಾ ಸ್ವತ್ತುಗಳು ಒಂದಕ್ಕೊಂದು ತಾಗಿಕೊಂಡಿದೆ. ದಾವಾ ಬಿ ಅನುಸೂಚಿ ಸ್ವತ್ತಿನ ಪೂರ್ವ ದಿಕ್ಕಿಗೆ ದಾವಾ ಬಿ ಅನುಸೂಚಿ ಸ್ವತ್ತು ಇದೆ. ದಾವಾ ಬಿ ಅನುಸೂಚಿ ಸ್ವತ್ತಿನ ಪೂರ್ವ ದಿಕ್ಕಿಗೆ ಜಯರಾಮೇಗೌಡರವರ ಜಮೀನು ಇದೆ, ಉತ್ತರಕ್ಕೆ ನಾಗೇಶರವರ ಜಮೀನು, ದಕ್ಷಿಣಕ್ಕೆ 173 ರಲ್ಲಿನ ನಮ್ಮ ಜಮೀನು ಇದೆ.

ನಾಗೇಶರವರಿಗೆ ಜಮೀನನ್ನು ಈ ಹಿಂದೆ ನಾವೆ ಕೊಟ್ಟಿದ್ದು, ಹಾಗೆ ಸರ್ವೆ ನಂ.187/2 ರಲ್ಲಿ 2 ಎಕರೆ 31 ಗುಂಟೆ ಜಮೀನನ್ನು ಕೊಟ್ಟಿದ್ದೇವೆ. ಅ ಜಮೀನು ಅಲ್ಲಿ ಅವರ ಸ್ವಾದೀನದಲ್ಲಿಯೇ ಇದೆ. ಆ ಜಮೀನನ್ನು ಎಪ್ಟು ಮೊತ್ತಕ್ಕೆ ಕೊಟ್ಟಿದ್ದೇವು ಎಂದು ನನಗೆ ಈಗ ನೆನಪಿಲ್ಲ. ಜೋಗಣ್ಣನಕರೆ ಗ್ರಾಮದ ಸರ್ವೆ ನಂ.187/2 ಮತ್ತು ದಾವಾ ಬಿ ಅನುಸೂಚಿ ಸ್ವತ್ತಿಗೆ ಒಂದೇ ಚೆಕ್ಕು ಬಂದಿ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿ ಸ್ವತ್ತು ಹಾಗೂ ಸರ್ವೆನಂ.187/2 ಒಂದಕ್ಕೊಂದು ತಾಗಿಕೊಂಡಿದ್ದು, ನಾಗೇಶರವರೇ ಅಂದರೆ ಪ್ರತಿವಾದಿಯೇ ಅದರ ಸ್ವಾದೀನದಲ್ಲಿ ಇದ್ದಾರೆ ಹಾಗೂ ಶಾಲಾ ಕಮಿಟಿಗೆ ಹಣ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.187/2 ರ ಜಮೀನನ್ನು ಪ್ರತಿವಾದಿ ನಮ್ಮಿಂದ ರೂ.8 ಲಕ್ಷಕ್ಕೆ ಖರೀದಿಸಿ ಈಗ ಅಬಿವೃದಿಪಡಿಸಿದ ನಂತರ ಅದನ್ನು ಒಂದು ಕೋಟಿ ಬೆಲೆಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಹೀಗಾಗಿ ನಾವು ಜಮೀನು ಮಾರಾಟ ಮಾಡಿದ ಬಾಬ್ತು ಹೆಚ್ಚು ಹಣ ನೀಡಬೇಕು ಎಂದು ನಾನು ಪ್ರತಿವಾದಿಯ ಬಳಿ ಕೇಳಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿ ಹಣ ಕೊಡಲು ಒಪ್ಪದಿದ್ದ ಕಾರಣ ಈ ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ-10 ರ ದಾಖಲೆಯನ್ನು ಈ ದಾವೆಗೆ ಉಪಯೋಗವಾಗುವಂತೆ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಶಾಲೆಯ ಮುಖ್ಯಸ್ಥರೊಂದಿಗೆ ಶಾಮೀಲಾಗಿ ನಾನು ನಿಪಿ-11 ರ ದಾಖಲೆಯನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಗೇಣಿ ರೂಪದಲ್ಲಿ ಏನನ್ನು ಕೊಡದೇ ಇದ್ದರೂ 18 ವರ್ಷಗಳಿಗೆ

ಒಟ್ಟಾರೆಯಾಗಿ 5 ಸಾವಿರ ಪಾವತಿ ಮಾಡಲಾಗಿದೆ ಎನ್ನುವ ರೀತಿಯಲ್ಲಿ ದಾಖಲೆಯನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕ್ ಶಾಖೆ ಸಂಖ್ಯೆ ಸರಿಯಾಗಿ ನಮೂದು ಮಾಡಲಾಗದ ಕಾರಣ ನಿಪಿ-10 ರಲ್ಲಿ ಸಂದಾಯ ಮಾಡಿರುವ ಹಣ ಶಾಲಾ ಅಬಿವೃದ್ಧಿ ಮಂಡಳಿಗೆ ಸಂದಾಯವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಬ್ಯಾಂಕ್ ಖಾತೆಯ ಪಾಸ್ ಬುಕ್ ನನ್ನ ಬಳಿ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು ಹಣ ಪಾವತಿ ಮಾಡಲು ಶಾಲಾ ಅಬಿವೃದ್ಧಿ ಮಂಡಳಿಯವರು ಒಪ್ಪಿಗೆ ಸೂಚಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಶಾಲಾ ಮುಖ್ಯೋಪಾದ್ಯಾಯರು ಸೇರಿ ನಿಪಿ-10 ಮತ್ತು 11 ರ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ದಾವಾ ಸಲ್ಲಿಸುವಾಗ ದಾವಾ ಸ್ವತ್ತುಗಳಿಗೆ ಪ್ರತ್ಯೇಕ ಚಕ್ಕುಬಂದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಾವಾ ಎ ಅನುಸೂಚಿ ಸ್ವತ್ತು ಪೋಡಿಯಾಗಿಲ್ಲ ಎಂದರೆ ಸರಿ. ಸರ್ವೆ ನಂಬರ್ 173 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಎ ಅನುಸೂಚಿ ಸ್ವತ್ತಿನ ಆಕಾರ ತೋರಿಸಲು ನಕ್ಷೆ ಇಲ್ಲ. ದಾವಾ ಸ್ವತ್ತುಗಳಿಗೆ ನಾನು ಬೇಲಿ ಹಾಕಿಲ್ಲ. ವಾದಿಗೆ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ವಾದಿಯು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೇ ಸತ್ಯ ಗೊತ್ತಾಗುತ್ತದೆ ಎಂದು ನಾನೇ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲುಪತ್ರ 1980-81 ರಲ್ಲಿ ಆಗಿದೆ. ದಾವಾ ಎ ಅನುಸೂಚಿ ಸ್ವತ್ತಿನಲ್ಲಿ ಕಾಫಿ, ಮೆಣಸು ಮತ್ತು ಅಡಿಕೆ ಬೆಳೆಯುತ್ತಿದ್ದೇವೆ. ಈ ಬಗ್ಗೆ ಪಹಣಿಯಲ್ಲಿ ನಮೂದು ಇದೆ. ದಾವಾ ಬಿ ಅನುಸೂಚಿ ಸ್ವತ್ತಿನಲ್ಲೂ ಸಹ ಅದೇ ಬೆಳೆಗಳನ್ನು ಬೆಳೆಯುತ್ತಿದ್ದೇವೆ. ಈ ಬಗ್ಗೆ ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ದಾವಾ ಬಿ ಅನುಸೂಚಿ ಸ್ವತ್ತಿಗೆ ಎಷ್ಟು ಖರ್ಚು ಮಾಡಿದ್ದೇವೆ ಹಾಗೂ ಆದರಿಂದ ಪ್ರತ್ಯೇಕವಾಗಿ ಆದಾಯ ಬರುವುದರ ಬಗ್ಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.